As there are no amendments, I will put all the clauses.

The question is :

"That clauses 2 and 1 and the Title and the Preamble stand part of the Bill.

The motion was adopted.

Clauses 2 and 1 and Title and the Preamble were added to the Bill.

Sri A. BHEEMAPPA NAIK.—Sir, I move :

"That the Hyderabad Agricultural Debtors Relief (Mysore Amendment) Bill, 1956, as passed by the Legislative Council, be passed."

Mr. SPEAKER.—The question is :

"That the Hyderabad Agricultural Debtors Relief (Mysore Amendment) Bill, 1956, as passed by the Legislative Council, be passed."

The motion was adopted.

CITY OF BANGALORE MUNICIPAL CORPORATION (AMENDMENT) BILL, 1956.

*Sri R. CHENNIGARAMIAH (Minister for Local Self-Government).—Sir, I beg to move :

"That the City of Bangalore Municipal Corporation (Amendment) Bill, 1956, as passed by the Legislative Council be taken into consideration."

Mr. Speaker, Sir, this is a very simple amendment brought before this House. It does not require a very long speech. In this connection, I would like to make a few remarks. In 1949 this Municipal Corporation Act came into being. The City of Bangalore was divided into 50 divisions. Each division constituted a single-member constituency and the voters' list was prepared on the basis of the then existing population in each constituency. Now, in the year 1956, it was found out that the population in some of the divisions had enormously increased. This result was that the strength of the voters in some constituencies rose from 2,000 to 17,000. It is therefore the duty of the responsible Government to see that the strength of the voters in every constituency is more or less the same. We have no objection to allow a variation of 10 per cent. But the population varied for the last few years, from 1949 to 1956, and the strength of the voters also was varying. So, it was thought desirable to change the divisions and to prepare voters list on the basis of the population.

Since the Houses of Legislature were not in session, Government considered it desirable to extend the term by an ordinance and this Bill has not been placed before this for your kind acceptance.

Mr. SPEAKER.—The motion is :

That the City of Bangalore Municipal Corporation (Amendment) Bill, 1956, as passed by the Legislative Council be taken into consideration.

*ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ನಾನು ಈ ಮಸೂದೆಯನ್ನು ವಿರೋಧಿಸಲು ಏಳಬೇಕಾಗಿ ಬಂದಿದೆ. ಇದು ನಮ್ಮ ದುರದೃಷ್ಟ. ಮಾನ್ಯ ಮಂತ್ರಿಗಳಿಗೆ ಈ ಮಸೂದೆಯನ್ನು ಮಂಡಿಸುವುದಕ್ಕೆ ಧೈರ್ಯವಿರಲಾರದೆಂದು ತಿಳಿದುಕೊಂಡಿದ್ದೆ. ಆದರೆ ಅವರು ಧೈರ್ಯದಿಂದ ಮಂಡಿಸಿ ಇದನ್ನು ಸಮರ್ಥಿಸಿ ಎರಡುಮಾತನ್ನು ಹೇಳಿದರು. ಇದು ನಮಗೆ ಮಾಮೂಲಾಗಿಬಿಟ್ಟಿದೆ. ಸ್ಥಳೀಯ ಸಂಸ್ಥೆಗಳಿಗೆ ಪ್ರಜಾ ಪ್ರಭುತ್ವ ಕೊಡಬೇಕಾದರೆಯೇ ಬಹಳವಾಗಿ ಅನುಮಾನ ಪಡುತ್ತಿದ್ದ ಈ ಸರ್ಕಾರ ಆ ಅಧಿಕಾರವನ್ನು ಚಲಾಯಿಸುವುದಕ್ಕೆ ಇದ್ದ ಅವಕಾಶವನ್ನು ತಪ್ಪಿಸಿರುವುದು ಬಹಳ ವಿಷಾದಕರವಾಗಿದೆ. ಯಾವುದೇ ಅಧಿಕಾರವಾಗಲಿ ಪ್ರಜಾ ಪ್ರಭುತ್ವ ತತ್ವದಮೇಲೆ ಪ್ರಾಪ್ತವಾದಾಗ ಆಡಳಿತ ಸರಿಯಾಗಿ ನಡೆಸಿದೆಯೇ, ಇಲ್ಲವೇ ಎಂದು ಜನತೆಗೆ ಸೂಚಿಸಲು ಒಂದು ವಾಯಿದೆಯಿದೆ. ಒಂದುಸಾರಿ ಚುನಾವಣೆಯಾದ ಮೇಲೆ ಮೂರುವರ್ಷ ಪ್ರಜೆಗಳು ಆಡಳಿತ ನಡೆಯುವುದನ್ನು ನೋಡುತ್ತಿರುತ್ತಾರೆ. ಅದು ಸರಿಯಾಗಿ ನಡೆಯುತೇ, ಇಲ್ಲವೇ ಎಂದು ನೋಡಿ ಒಂದು ಡೈರಕ್ಷನ್ ಕೊಡಲು ಚುನಾವಣೆ ನಡೆಯಬೇಕಾಗಿದೆ. ಅಂಥ ಚುನಾವಣೆಯನ್ನು ನಡೆಸುವುದಕ್ಕೆ ಅಡ್ಡಬರುವ. ಅಂಥದಕ್ಕೂ ಕೂಡ ಆರ್ಡಿನೆನ್ಸ್ ರಕ್ಷಣೆ ಪಡೆಯುವ ಸರ್ಕಾರ ಒಂದು ಘಂಟೆ ಕೂಡ ಆಡಳಿತ ನಡೆಸಲು ಲಾಯಬ್ಬಲ್ಲವೆಂದು ನಾನು ಹೇಳುತ್ತೇನೆ. ಕಾರಣ ಇಷ್ಟೆ : ಓಟರುಗಳ ಸಂಖ್ಯೆ ಹೆಚ್ಚಾಯಿತೆಂದು ಹೇಳುತ್ತಾರೆ. ಅದಕ್ಕೆ ನಮ್ಮ ಆರೋಗ್ಯ ಮಂತ್ರಿಗಳು ಬರ್ತ್ ಕಂಟ್ರೋಲಿಗೆ ಜಾಗ್ರತೆ ಏರ್ಪಾಡುಮಾಡಲಿಲ್ಲ, ಅದು ಸರ್ಕಾರದ ತಪ್ಪು ಎಂದು ಹೇಳಬೇಕಾಗಿದೆ. ಕೇವಲ ಜನಾಂಗವು ಅಲ್ಪಸ್ವಲ್ಪ ಹೆಚ್ಚಿದ ಮಾತ್ರಕ್ಕೇ ಈ ಕಾನೂನು ತರಬೇಕಾಯಿತೆಂದ ಹೇಳತಕ್ಕದ್ದು ಯಾರೂ ಒಪ್ಪತಕ

(ಶ್ರೀ ಬಿ. ಹುಚ್ಚೇಗೌಡ)

ಮಾತಲ್ಲ. ಆದರೂ ಕೂಡ ಏನಾದರೂ ಅಂಥ ಅನಿವಾರ್ಯದಿಂದ ಬದಲಾವಣೆಯಾದರೂ ಅದನ್ನು ಕಾಲಕ್ಕೆ ಮುಂಚೆ ನಿರೀಕ್ಷಿಸಿ ತಕ್ಕ ಏರ್ಪಾಡು ಮಾಡಬೇಕಾದದ್ದು ಸರ್ಕಾರದ ಕರ್ತವ್ಯ. ಪ್ರಜಾಪ್ರಭುತ್ವ ತತ್ವಕ್ಕನುಸಾರವಾಗಿರುವಂತೆ ನಡೆಸಿ ಅನಂತರ ಬದಲಾವಣೆ ಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಅವಕಾಶ ಏದೆ. ನವ ಗೆ ಕಾಲಾವಕಾಶವಿಲ್ಲವೆಂದು ಹೇಳುವುದಾದರೆ ಸರ್ಕಾರ ಐದು ತಿಂಗಳಲ್ಲಿ ಇಂಥ ಕಾರ್ಯಕ್ಕೇಕೆ ಕೈ ಹಾಕಬೇಕಾಗಿತ್ತು? ಇನ್ನು ಮೂರುತಿಂಗಳಲ್ಲೇನು ತಾನೆ ಸಾಧಿಸಲು ಸಾಧ್ಯ? ಎರಡುತಿಂಗಳೊಳಗಾಗಿ ಏಕೆ ಈ ಕೆಲಸ ಮಾಡಬೇಕಾಗಿತ್ತು? ಇಷ್ಟು ಧೈರ್ಯದಿಂದ ಸ್ಥಳೀಯ ಸಂಸ್ಥೆಗಳ ವಿಚಾರದಲ್ಲಿ ಅದರಲ್ಲೂ ಕೂಡ ನಮ್ಮ ಮೈಸೂರು ದೇಶದ ಪ್ರಮುಖನಗರದಲ್ಲಿ ಮತ್ತು ಮುಂದುವರಿದಂಥ ಪ್ರಜೆಗಳಿರುವ ಊರಿನಲ್ಲಿ ಹೀಗೆ ಅವರ ಹಕ್ಕುಬಾಧ್ಯತೆ ವಿಚಾರದಲ್ಲಿ ಕೊಂಕು ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತಿರುವುದು ಹೇಸಿಗೆಯ ಕೆಲಸ ಎಂದು ನಾನು ಹೇಳಲೇಬೇಕಾಗಿದೆ. ಇದೊಂದೇ ಸಂದರ್ಭದಲ್ಲಲ್ಲದೆ ಬಳ್ಳಾರಿ ಮತ್ತು ಹುಬ್ಬಳ್ಳಿಗಳ ವಿಚಾರದಲ್ಲೂ ಹೀಗೆಯೇ ಮುಂದುವರಿಸಿದರೆಂದು ಕೇಳಿದ್ದೇನೆ. ಇನ್ನೊಂದು ವಿಚಿತ್ರವಾದ ಉದಾಹರಣೆ ಹೇಳಬಹುದು. ನಮ್ಮಲ್ಲೇ ಒಂದು ಮುನಿಸಿಪಾಲಿಟಿ ಚುನಾವಣೆಗೆ ಕ್ಯಾಲೆಂಡರ್ ಆಫ್ ಈವೆಂಟ್ಸ್ ತಯಾರಿಸಿ ಅಪ್ಲಿಕೇಷನುಗಳನ್ನು ಕರೆದದ್ದೂ ಆಯಿತು. ಇನ್ನೇನು ಚುನಾವಣೆ ನಡೆಯಬೇಕು ಎನ್ನುವಾಗ ಆ ಕ್ಷಣದಲ್ಲೇ ಮುನಿಸಿಪಾಲಿಟಿ ಸೂಪರ್‌ಸೀಡ್‌ಮಾಡಿದೆ ಎಂದು ಹೇಳಿ ಅರಸೀಕೆರೆ ಅಮಲ್ದಾರರಿಗೆ ಅದನ್ನು ವಹಿಸಿದರು. ಇಂಥ ಒಂದು ಕೆಲಸಮಾಡುವುದಕ್ಕೆ ಕೂಡ ಹೇನದ ಸರ್ಕಾರಕ್ಕೆ ಯಾವ ಅಧಿಕಾರವನ್ನುತಾನೇ ಕೊಡಬಹುದು!

ಶ್ರೀ ಆರ್. ಚೆನ್ನಿಗರಾಮಯ್ಯ.—ಎಷ್ಟು ದಿವಸಗಳ ಹಿಂದೆ ತಾವು ಹೇಳಿದಂತೆ ನಡೆಯುತು?

ಶ್ರೀ ಬಿ. ಹುಚ್ಚೇಗೌಡ.—ಆರುತಿಂಗಳ ಹಿಂದೆ. ಚುನಾವಣೆ ನಡೆಯುವುದಕ್ಕೆ ಏರ್ಪಾಡಾದ ಮೇಲೆ ಸೂಪರ್‌ಸೀಡ್ ಮಾಡುವುದೇಕೆ? ಕೌನ್ಸಿಲ್‌ಮಾಡಿದ ತಪ್ಪಿಗೆ ಹಾಗೆ ಮಾಡಬೇಕೆ? ಚುನಾವಣೆ ನಡೆಯಬೇಕಾದ ದಿವಸ ಬೆಳಿಗ್ಗೆ ಚುನಾವಣೆ ನಡೆಸಕೂಡದೆಂದು ನಿಲ್ಲಿಸಿದರೆ ಅದಕ್ಕಿಂತ ಬೇರೆ ಉದಾಹರಣೆ ಬೇಕೆ? ಹಾಗಿರುವಾಗ ಇಂಥ ಬಿಲ್ಲನ್ನು ವಿರೋಧಿಸುತ್ತಾರೆಂದು ಆ ಕ್ಷೇತ್ರವನ್ನು ಸುಮ್ಮನಿರಲು ಸಾಧ್ಯವೇ! ನಾನು ಹೇಳಿದ ಉದಾಹರಣೆಗಳಿರುವಾಗ ಯಾವ ಎದೆಗಾರಿಕೆಯಿಂದ ಉತ್ತರ ಕೊಡುತ್ತಾರೋ ನೋಡೋಣ. ಯಾವುದೋ ಅನಿವಾರ್ಯದಿಂದ ಒಂದೆರಡು ಬದಲಾವಣೆಯಾಗಬೇಕಾಗಿದ್ದರೂ ಇಂಥ ಆರ್ಡಿನೆನ್ಸ್ ಹೊರಡಿಸಿ ಚುನಾವಣೆ ಮುಂದುವರಿಸುವುದು ಖಂಡಿತ ಸರಿಯಲ್ಲ.

ಇನ್ನೊಂದು ವಿಷಯ. ಹಿಂದಿನ ಆಕ್ಟಿನಲ್ಲಿ ಮುಂದುವರಿಸುವುದಕ್ಕೆ ಕೂಡ ಅಧಿಕಾರವಿರಲಿಲ್ಲ. ಅದನ್ನು ಕೂಡ ಈಗ ತೆಗೆದುಕೊಂಡಿದ್ದಾರೆ. ಈಗ ಏಕೆ ಆ ಸಂಸ್ಥೆಯ ಮೇಲೆ ಗದಾಪ್ರಹಾರ ನಡೆಸುತ್ತಾರೆಂಬುದಕ್ಕೆ ಸಾಕಷ್ಟು ಕಾರಣ ಸಹ ಕೊಡುತ್ತಿಲ್ಲ. ಇದನ್ನೆಲ್ಲಾ ನೋಡಿದರೆ ಸ್ಥಳೀಯ ಸಂಸ್ಥೆಗಳ ಕೆಲಸ ನೋಡಿಕೊಳ್ಳಲು ಸರಿಯಾದ ಜನರಿಲ್ಲವೆಂದು ಸರ್ಕಾರ ಹೇಳುವುದಾದರೆ ಸರ್ಕಾರದಲ್ಲಿ ಅಧಿಕಾರ ಚಲಾಯಿಸುವ ಮಂತ್ರಿಗಳಿಗೆ ಯಾವ ರೀತಿ ಅಧಿಕಾರವಿದೆಯೆಂದು ಪ್ರಶ್ನೆ ಮಾಡಬೇಕಾಗುತ್ತದೆ. ದೇಶದಲ್ಲಿರುವ ಜನರಿಗೆಲ್ಲಾ ಓಟಿನ ಹಕ್ಕು ಒಂದೇ ಸಮನಾಗಿದೆ; ಪ್ರತಿಯೊಬ್ಬರಿಗೂ ಆಡಳಿತ ನಡೆಸುವ ಹಕ್ಕಿದೆ; ಪ್ರಜೆಗಳು ಚುನಾಯಿಸಿ ಕಳುಹಿಸಿದ ಮೇಲೆ ಯಾವ ಅಧಿಕಾರ ಬೇಕಾದರೂ ಚಲಾಯಿಸಬಹುದು. ಅಂಥದರಲ್ಲಿ ಚುನಾಯಿತ ಪ್ರತಿನಿಧಿಗಳು ಸರಿಯಾಗಿ ಕೆಲಸಮಾಡುವುದಿಲ್ಲ ಎಂದು ಹೇಳಿ ತಮ್ಮ ಪಕ್ಷಕ್ಕೆ ಮುಂದಿನ ಚುನಾವಣೆಗಳಲ್ಲಿ ಬೆಂಬಲ ಕಡಮೆ ಯಾಗುತ್ತದೆಂಬ ಉದ್ವೇಶದಿಂದ, ಚುನಾವಣೆಯಿಂದ ಧಕ್ಕೆಬರುತ್ತದೆ ಎಂಬ ಭೀತಿಯಿಂದ ಈ ಮಸೂದೆ ತಂದಿರುವರೇ ಹೊರತು ಮತ್ತಾವ ಕಾರಣವೂ ಇಲ್ಲ. ಆದ್ದರಿಂದ ಈ ಮಸೂದೆಯನ್ನು ತೀವ್ರವಾಗಿ ವಿರೋಧಿಸುತ್ತೇನೆ

*Sri S. SRINIVASA IYENGAR (T.-Narasipur).—Sir, I oppose this Bill for the following reasons. The elections of councillors to the Corporation are conducted with the provisions of the Corporation Act. Why should the Government interfere with these elections? Clause 3 of the Bill seeks to invalidate all actions taken by that Corporate Body from the first day of January 1956. What is the reason given by the Government? They say that the electoral strength in several divisions vary widley. How are Government concerned? The last elections were held in 1953 to the Corporation of Bangalore. The term of office is for three years. The Corporation should have taken early steps to see that divisions were properly divided and were properly carved out. That being the case, why should Government seek to introduce a clause by means of which they want to take executive power to extend the term of office of elected councillors? Sir, we have bitter experience of misuse or abuse of such powers. Bellary is a standing example. Under the old Madras Act the Government had only the power to extend the period for about 6 months. The moment Bellary was merged with Mysore State, the Government introduced a piece of legislation by means of which they took the power to extend for a period of one year. Subsequently there was another amendment extending the period further by another year. To-day, in Bellary we have no responsible local self-government. Such intrusions into the powers of a corporate body are not wanted and I for one, will not support such a thing. The very object of creating local self-government institution is to enable the people of the particular area to

manage their own affairs. The Minister was pleased to say that there is large influx and that has disabled them to hold elections. Further he says, "this provision is found in the Town Municipalities Act and therefore we want this provision." Is that a good analogy, Sir? In the Town Municipalities there have been many instances where the discharge of duties has been questioned. But can the administration of the Town Municipalities be compared to the administration of the Corporation of Bangalore City? Therefore, I believe the Executive wants to have their say in every elected authority and it is a direct hit and encroachment into the democratic principle.

*ಶ್ರೀ ಆರ್. ಅನಂತರಾಮನ್ (ಚಾಮರಾಜ ಪೇಟೆ).—ಈ ವಿಷಯದಲ್ಲಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಕಾರ್ಪೊರೇಷನ್ ಚುನಾವಣೆ 1953ನೇ ಡಿಸೆಂಬರಿನಲ್ಲಿಯಾಯಿತು. 1953ನೇ ಇಸವಿಯಿಂದಲೂ ಈ ವಿಷಯ ಬರುತ್ತಲೇ ಇದೆ. ಈ ಬೆಂಗಳೂರು ನಗರದಲ್ಲಿ ಕೆಲವು ಕಾಂಸ್ಟಿಟ್ಯುಎನ್ಸಿಗಳಲ್ಲಿ ಬಹಳ ಕಡಿಮೆ ಸಂಖ್ಯೆಯ ಮತದಾರರಿದ್ದಾರೆ. ಚಾಮರಾಜ ಪೇಟೆಯ ಒಂದು ಡಿವಿಜನ್ನಿನಲ್ಲಿ 23,000 ಮತದಾರರು ಗಳಿದ್ದಾರೆ. ಹಾಗೆಯೇ ಬೆಂಗಳೂರು ಕಂಟೋನ್ಮೆಂಟಿನಲ್ಲಿ ಒಂದು ಡಿವಿಜನ್ನಿನಲ್ಲಿ 5,000 ಮತದಾರರುಗಳಿದ್ದಾರೆ. ಒಂದು ಕಡೆ 5,000 ವೋಟರುಗಳು ಮತ್ತೊಂದು ಕಡೆ 23,000 ವೋಟರುಗಳಿರುವುದು ಸರಿಯಾಗಿಲ್ಲ. Corporation Commissioner ಅವರು ಒಂದು ಕಾಂಸ್ಟಿಟ್ಯುಎನ್ಸಿಯಲ್ಲಿ 75,000 ಇನ್ನೊಂದು ಕಾಂಸ್ಟಿಟುಎನ್ಸಿಯಲ್ಲಿ 2000 ಮತ್ತೊಂದರಲ್ಲಿ ಒಂದು ಲಕ್ಷ ಈ ರೀತಿ ಯಾಗಬಾರದು, ಸಮಾನವಾಗಿರಬೇಕೆಂದು ಸರ್ಕಾರಕ್ಕೆ ಸಲಹೆ ಮಾಡಿದ್ದರು. ಅದರಂತೆ ಸರ್ಕಾರದವರು ಈ ರೀತಿಯ ಬಿಲ್ಲನ್ನು ಮಂಡಿಸಿದ್ದಾರೆ.

ಕಾರ್ಪೊರೇಷನ್ನಿನಲ್ಲಿರುವ ಕಾಂಗ್ರೆಸ್ ಪಾರ್ಟಿಯವರ ಅನುಕೂಲಕ್ಕೋಸ್ಕರ ಈ ರೀತಿ ಮಾಡುತ್ತಿದ್ದಾರೆ ಎಂದು ಹೇಳುವುದು ಸರಿಯಲ್ಲ. ಈಗಾಗಲೇ ಕಾಂಗ್ರೆಸ್ಸಿಗೆ ಬಹುಮತವಿದೆ, ಪಿ. ಎಸ್. ಪಿ. ಮತ್ತು ಕಮ್ಯುನಿಸ್ಟ್ ಪಾರ್ಟಿಗಳಿಗೆ ಅನುಕೂಲವಾಗುವುದಿಲ್ಲವೆಂದು ಕೆಲವು ಸದಸ್ಯರು ಹೇಳಿದರು. ಈ ಕಾರ್ಪೊರೇಷನ್ ಆಕ್ಟಿನಿಂದ ಅಂತಹ ಭಯಕ್ಕೇನೂ ಕಾರಣವಿಲ್ಲ. ಡಿವಿಜನ್ನುಗಳು ಸಮಾನವಾಗಿರಬೇಕು. ಒಂದು ಕಡೆ 5,000 ಇನ್ನೊಂದು ಕಡೆ 23,000 ಹೀಗಿದ್ದರೆ ಅನಾನುಕೂಲಗಳು ಹೆಚ್ಚು. ಹೆಚ್ಚು ಹಣ ಖರ್ಚಾಗುತ್ತದೆ. ಇದಲ್ಲದೆ ಲಂಚ ರುಷುವತ್ತುಗಳಿಗೆ ಅವಕಾಶವಾಗುತ್ತದೆ. ವೋಟರುಗಳು ಜಾಸ್ತಿಯಾಗದಂತೆ Single Member Division ಮಾಡಬೇಕೆಂದು ಜನರುಅಭಿಪ್ರಾಯ ಪಟ್ಟುದರ ಮೇಲೆ ಈಗ ಶ್ರೀ ಚೆನ್ನಿಗರಾಮಯ್ಯನವರು ನಾಗರಿಕರಿಗೆ ಅನುಕೂಲವಾಗಲೆಂದು ಈ ಮಸೂದೆಯನ್ನು ತಂದಿದ್ದಾರೆ.

Sri S. SRINIVASA IYENGAR.—On a point of information, Sir, Because he was the ex-Mayor of Corporation of the City of Bangalore he has explained the position. He said that the people have agreed to the re-distribution of constituencies. May I know how he obtained the opinion of the people? Did the Corporation conduct referendum in this respect?

ಶ್ರೀ ಆರ್. ಅನಂತರಾಮನ್.—ಅದು ಒಂದು ಅಭಿಪ್ರಾಯ. ನಾನು ಬೆಂಗಳೂರಿನಲ್ಲಿದ್ದುದರಿಂದ ಇವೆಲ್ಲ ಚೆನ್ನಾಗಿ ಗೊತ್ತಾಗಿದೆ. ಈ ಕಾನೂನು ಸರಿಯಾಗಿದೆ ಇದನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮುಳಬಾಗಿಲು—ಅನುಸೂಚಿತ ಜಾತಿಗಳು).—ಸ್ವಾಮಿ, ಈ ಮಸೂದೆಯನ್ನು ಸಂಪೂರ್ಣವಾಗಿ ನಾನು ವಿರೋಧಿಸುತ್ತೇನೆ. ಸರ್ಕಾರದವರು ತಮ್ಮ ತಮ್ಮ ಅನುಕೂಲಕ್ಕೋಸ್ಕರ ಕಾರ್ಪೊರೇಷನ್ ಅವಧಿಗೆ ಜೀವದಾನ ಮಾಡಿಕೊಳ್ಳುತ್ತಾ ಬಂದಿದ್ದಾರೆಯೋ, ಅಥವಾ ತಮ್ಮ ಕಡೆಯವರಿಗೆ ಜೀವನ ಕಲ್ಪಿಸುವುದಕ್ಕಾಗಿ ಹೀಗೆ ಮಾಡುತ್ತಿದ್ದಾರೆಯೋ ಏನೋ ಒಂದೂ ನನಗೆ ಗೊತ್ತಾಗುವುದಿಲ್ಲ. ಅವರು ವೋಟರುಗಳ ಸಂಖ್ಯೆ ಹೆಚ್ಚಾಗುತ್ತಾ ಬಂದುರುವುದರಿಂದ ಮತ್ತು ಇದನ್ನು ಸಮನಾಗಿ ಏಂಗಡಿಸುವ ದೃಷ್ಟಿಯಿಂದ ಈ ಆಕ್ಟನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಆದರೆ ಈ ಕಾನೂನಿನಿಂದೇನೂ ಉಪಯೋಗವಿಲ್ಲ. ಮುನಿಸಿಪಲ್ ಕಾರ್ಪೊರೇಷನ್ನು ಸ್ವತಂತ್ರವಾಗಿ ಕೆಲಸ ಮಾಡತಕ್ಕ ಒಂದು well organised institution. ಇದರಲ್ಲಿ 75 ಮೆಂಬರುಗಳಿದ್ದಾರೆ. ಅವರು ಏಜಿ ಲೆಂಟ್ ಆಗಿ ಕೆಲಸ ಮಾಡಿ ವರ್ಷಕ್ಕೇ ವರ್ಷಕ್ಕೇ ಪಾಪ್ಯುಲೇಷನ್ ಫಿಗರ್ಸ್‌ನ್ನು ರಿವೈಜು ಮಾಡುವುದಕ್ಕೆ ಅಧಿಕಾರವಿದೆ. ಚುನಾವಣೆಯ Calendar of Events ಪ್ರಕಟಿಸಿ ಸ್ಪರ್ಧಿಗಳಿಂದ ಅಪ್ಲಿಕೇಷನ್ನುಗಳನ್ನೂ ತೆಗೆದು ಕೊಂಡು ಚುನಾವಣಾ ತಾರೀಖನ್ನು ನಿಗದಿ ಮಾಡಿದ ಮೇಲೆ, ಚುನಾವಣೆಗಳನ್ನೂ ಮುಂದುವರಿಸಿದರು. ಸರ್ಕಾರ ಆ ರೀತಿ ಮಾಡಿದ ಆಜ್ಞೆಯ ಮೇಲೆ ಬೇಕಾದಷ್ಟು ಪ್ರತಿಭಟನೆ ಕೂಡಾಬಂತು. ಆದರೆ ಇದರಲ್ಲಿ ಏನೋ ಒಂದು ಆಡಳಿತ ದೃಷ್ಟಿಯಿಂದ ತೊಂದರೆಯೆಂದು ನೆಪಮಾಡಿಕೊಂಡು, ನಾವು ವಿರೋಧ ಪಕ್ಷದಲ್ಲಿರುವುದರಿಂದ ಯಾವಾಗಲೂ ವಿರೋಧ ಮಾಡುವುದೇ ನಮ್ಮ ಕೆಲಸವೆಂದೂ ಹೇಳುತ್ತಾ, ನಮ್ಮಿಂದ ಯಾವುದೇ Constructive Suggestions ಬಂದರೂ ಕೂಡ ಅದಕ್ಕೆ ಸರ್ಕಾರದವರು ಗಮನ ಕೊಡುತ್ತಾ ಇಲ್ಲ.

ಬೆಂಗಳೂರು ಸಿಟಿಯಲ್ಲಿ ಕಾಂಗ್ರೆಸ್ ಮುನಿಸಿಪಲ್ ಎಲೆಕ್ಷನ್ ನಡೆಯುವುದು, ಅದು ಒಂದು ದೇಹದ ನಾಡಿಯನ್ನು ಪರೀಕ್ಷೆ ಮಾಡಿದ ಹಾಗೆ. ಸರ್ಕಾರದವರು ಈ ಮುನಿಸಿಪಲ್ ಎಲೆಕ್ಷನ್ನನ್ನು ಒಂದು ಪಕ್ಷದ ಸಮಸ್ಯೆಯಂತೆ ನೋಡುತ್ತಿದ್ದಾರೆ. ಆ ದೃಷ್ಟಿಯಿಂದ ಚುನಾವಣೆಗಳನ್ನು ಮುಂದುವರಿಸಿದ್ದಾರೆಂದು ಅರ್ಥವಾಗುತ್ತದೆ.

ಹೀಗೆ ಈ ಬಿಲ್ಲನ್ನು ಅವಸರವಸರವಾಗಿ ತಂದು ಈ ರೀತಿ ಏಕೆ ಪಾಸು ಮಾಡಬೇಕೋ ತಿಳಿಯುವುದಿಲ್ಲ. ಈಗ ತಂದಿರತಕ್ಕ ಈ ಬಿಲ್ಲು ಸರಿಯಾಗಿಲ್ಲ. ಆದಕಾರಣ ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಅಲ್ಲದೆ ಈಗ ಇನ್ನೊಂದೆರಡು ತಿಂಗಳಲ್ಲಿ ಜನರಲ್ ಎಲೆಕ್ಷನ್ ಬರುತ್ತದೆ. ಅದರಂತೆಯೇ ಮುನಿಸಿಪಲ್ ಎಲೆಕ್ಷನ್‌ನನ್ನು ಕೂಡ ಏರ್ಪಾಡು ಮಾಡಬೇಕು. ಈ ಕಾರಣಗಳಿಂದ ಈ ಬಿಲ್ಲನ್ನು ವಿರೋಧಿಸುತ್ತೇನೆ.

*Sri R. CHENNIGARAMIAH.—Mr. Speaker, Sir, I am really surprised to see my friends on the other side opposing this Bill. I really thought that they would congratulate the Government for having taken prompt action in this behalf. I only feel, Sir, that they are singing their own slogans just to consolidate their position. But in their heart of heart they really feel happy over this piece of legislation. Sri S. Srinivasa Iyengar was pleased to remark that the Corporation authorities should have taken necessary action to ascertain the wishes of the people of the City. But I may inform him that it is the primary responsibility of the Government to take necessary action in this behalf. Under Section 48, it is the Government that has got the power to alter the boundaries of the Corporation. Under that section we have taken power to bring forward this piece of legislation. It is not necessary that the Government should carry on propaganda or give wide publicity to find out whether the people are willing for the extension of time-limit or not.

Sri S. SRINIVASA IYENGAR.—The object of raising that point was to know whether the Government have taken action to ascertain the views of the people. That is all.

Sri R. CHENNIGARAMIAH.—There are several means through which we could ascertain the views of the people. Many representatives of important organisations came and told the Government that it is proper time now to take necessary action to alter the boundaries. It is not necessary that it should be published through newspapers.

Sri M. CHIKKALINGIAH.—On a point of clarification. ಒಂದು Point of clarification ಸ್ವಾಮಿ, ಈ ರೀತಿ postpone ಮಾಡಲು ಕಾರ್ಪೊರೇಷನ್ನಿಂದ ಏನಾದರೂ Resolution ಒಂದು ಪಾಸುಮಾಡಿ ಬಂದಿತ್ತೇ?

Sri R. CHENNIGARAMIAH.—Not at all necessary. As I have already stated that it is the responsibility of the Government under section 48 to take power and remedy the efect Accordingly we have taken steps to remedy the defect. There are several people who have certainly brought these defects to the notice of Government and the Government have thought fit to take immediate action in this matter. It is well-known to the people and to the Government that the strength of the voters ranges from 2,000 to 17,000. All the constituencies being single-member constituencies—in one constituency there are 2,000 voters and in another constituency there are 17,000 voters,—what justification is there for the Government to continue this sort of state of affair? Simply because some people are anxious to hold the election? They know the result of their election, but still they go on singing their own songs. They are really not anxious to hold the elections. They are opposing the Bill just to show to the people that they are anxious to hold the elections. If the elections are

6 P.M.

they know the result. But the truth is that they are also anxious to have the extension so that they can continue for one more year. This is an ordinary thing which everybody can understand. I can understand their arguments if the Government is in the wrong. We have done the right thing. We have set right the defect which has been there all these years. If some gentleman has noticed it, is it his fault? We have moved in the matter in good time and I am sure we have moved in the right direction. It is with the best of intentions that this has been done. As the House was not in session, we had to promulgate an ordinance and the same has been brought to the notice of the House.

ಶ್ರೀ ಬಿ. ಹುಚ್ಚೇಗೌಡ.—ಒಂದು ವಿಷಯ. ಕೌನ್ಸಿಲ್‌ನಲ್ಲಿರುವ ವೇಕೆನ್ಸಿಗಳನ್ನು ಬರ್ತಿ ಮಾಡುವುದಕ್ಕೆ ಸರ್ಕಾರದವರು action ತೆಗೆದುಕೊಂಡಿದ್ದಾರೆಯೇ?

Sri R. CHENNIGARAMIAH.—We have taken the necessary action to fill up those vacancies by holding bye-elections.

Mr. SPEAKER.—The question is:

"That the City of Bangalore Municipal Corporation (Amendment) Bill, 1956, as passed by the Legislative Council, be taken into consideration."

The motion was adopted.

Mr. SPEAKER.—The question is :

"That Clauses 2, 3, 4 and 1 and the Title and the Preamble stand part of the Bill."

The motion was adopted.

Clauses 2, 3, 4 and 1, the Title and the Preamble were added to the Bill.

Motion to pass.

Sri R. CHENNIGARAMIAH.—Sir, I beg to move :

"That the City of Bangalore Municipal Corporation (Amendment) Bill, 1956, as passed by the Legislative Council, be passed."

Mr. SPEAKER.—Motion moved :

"That the City of Bangalore Municipal Corporation (Amendment) Bill, 1956, as passed by the Legislative Council, be passed."

Sri B. HUTCHE GOWDA.—Sir, Sub-clause (i) of clause 3 provides as follows :—

"(i) all proceedings taken during the period between the first day of January 1956, and the date of publication of the said notification (hereinafter referred to as the said period) for fiilling up of vacancies arising by efflux of time in the office of councillors shall stand terminated."

Mr. SPEAKER.—I do not know what the Hon'ble Member wants to refer to.

Sri B. HUTCHE GOWDA.—I am pointing out whether it is in consonance with the statement of the Hon'ble Minister that the vacancies are advertised for being filled up. Further, Clause 3 (ii) says that all orders made and notifications issued in connection with the said proceedings shall cease to have effect. ಇದರಿಂದ bye-election ನಡೆಯುಕೂಡದೆಂದು ಅರ್ಥವಾಗುತ್ತದೆಯೇ ?

Sri R. CHENNIGARAMAIAH.—That does not refer to the bye-election.

Sri R. ANANTARAMAN.—That refers to the calendar of events that was issued in respect of the labour constituency.

ಶ್ರೀ ಬಿ. ಹುಚ್ಚೇಗೌಡ.—ಲೇಬರ್ ಕಾನ್ಸ್ಟಿಟ್ಯುಯೆನ್ಸಿ ಎಂದು ಬರೆದಿಲ್ಲ. ಮತ್ತು ಖಾಲಿ ಇರುವ ಸ್ಥಾನಪನ್ನು ಭರ್ತಿಮಾಡುವುದಕ್ಕೆ ಏನು ಕಾರ್ಯಕ್ರಮ ತೆಗೆದು ಕೊಂಡಿದ್ದಾರೆ? ಲೇಬರ್ ಆಗಲಿ, ಯಾವುದೇ ಆಗಲಿ, vacancy is a vacancy.

Sri R. CHENNIGARAMAIAH.—My friend is referring to four vacancies which are vacant in some of the constituencies in the City of Bangalore Municipal Corporation. The truth is that some Hon'ble Members have resigned but no calendar of events has been issued in connection with those vacancies. The Commissioner concerned has taken the necessary action to fill up those vacancies by holding bye-elections. That has nothing to do with this.

ಶ್ರೀ ಬಿ. ಹುಚ್ಚೇಗೌಡ.—Labour representation ಕಾಪ್ಪೊರೇಷನ್ನಿನಲ್ಲಿ ಇರಕೂಡದು ಎನ್ನುವುದು ಸರ್ಕಾರದವರ ಅಭಿಪ್ರಾಯವೇ ಎಂದು ನಾನು ಕೇಳುತ್ತೇನೆ.

Sri R. ANANTARAMAN.—So far as the labour constituency is concerned, the seat is not vacant. But there are four constituencies which have no representatives because some of the representatives have resigned. For that, Government have not taken any action. Two months prior to the Corporation election, the labour representatives will be elected.

Sri R. CHENNIGARAMAIAH.—These five vacancies are casual vacancies and not vacancies that fell vacant by efflux of time.

Sri B. HUTCHE GOWDA.—How is that vacancy filled up ?

Mr. SPEAKER.—I will explain the position to the Hon'ble Member. If the whole period of three years is over and if there be a vacancy, it shall stand terminated. That is what is meant by 'efflux of time'.

ಶ್ರೀ ಬಿ. ಹುಚ್ಚೇಗೌಡ.—ಈಗ ಕ್ಯಾಜುಯಲ್ ವೇಕೆನ್ಸಿಯನ್ನು ಭರ್ತಿ ಮಾಡಿದ್ದಾರೆಯೇ ?

Mr. SPEAKER.—That is a matter of detail. I would request the Hon'ble Member to offer relevant remarks on clause 3 (i).

Sri B. HUTCHE GOWDA.—Anyway, I am opposing the Bill. ಈಗ ಖಾಲಿಯಾದ ಸ್ಥಾನಗಳಿಗೆ ಭರ್ತಿಮಾಡುವುದಿಲ್ಲ. ಒಂದು ಸ್ಥಾನ ಖಾಲಿಯಾದ ಕೂಡಲೇ ಆ ಸ್ಥಾನಕ್ಕೆ, ಆ ಪ್ರದೇಶದ ಜನಗಳಿಗೆ ಯಾವ ಪ್ರಾತಿನಿಧ್ಯವೂ ಇರಕೂಡದು ಎಂದು ಸರ್ಕಾರದವರು ನಿರ್ಬಂಧಮಾಡುವುದಾದರೆ ಖಂಡಿತವಾಗಿಯೂ ಇದನ್ನು ವಿರೋಧಿಸಲೇ ಬೇಕಾಗಿದೆ. ಈ

(SRI B. HUTCHE GOWDA.)

ಕಾನೂನು ಪ್ರಕಾರ ಈಗ ಯಾವುದೇ ವೇಕೆನ್ಸಿ ಇರಲಿ, ಒಂದೇ ರೀತಿಯಾದ ಅಧಿಕಾರವನ್ನು ಕೇಳುತ್ತಿಲ್ಲ. ಮೂರು ನಾಲ್ಕು ಅಧಿಕಾರಗಳನ್ನು ಕೇಳುತ್ತಿದ್ದೀರಿ, ಮೊದಲನೆಯದಾಗಿ ಇದರಲ್ಲಿ ಕಾರ್ಪೊರೇಷ್ ಚುನಾವಣೆಗಳನ್ನು ಮುಂದಕ್ಕೆ ಹಾಕುವುದು ವಿಷಯ. ಒಂದು ವರ್ಷಕಾಲ ಚುನಾವಣೆಗಳನ್ನು ಮುಂದಕ್ಕೆ ಹಾಕುವುದಕ್ಕೆ original ಕಾನೂನಿಗೆ ತಿದ್ದುಪಡಿಬೇಕು. ಖಾಲಿ ಬಿದ್ದಸ್ಥಾನಗಳನ್ನು ಕೂಡ ಭರ್ತಿಮಾಡಕೂಡದು, ಆ ಪ್ರದೇಶದ ಜನಗಳಿಗೆ ಮುನಿಸಿಪಲ್ ಕಾರ್ಪೊರೇಷನ್ನಲ್ಲಿ ಯಾವ ವಿಧವಾದ ಪ್ರಾತಿನಿಧ್ಯವೂ ಇಲ್ಲದಂತೆ ಮಾಡಬೇಕು ಎಂದು ಇದನ್ನು ತಂದಿದ್ದಾರೆ. ಈ ಒಂದು ಪ್ರತಿಗಾಮಿ ತತ್ವಕ್ಕೆ ನಾವು ಖಂಡಿತವಾಗಿಯೂ ವಿರೋಧವನ್ನು ಸೂಚಿಸಲೇ ಬೇಕಾಗಿದೆ. ಯಾವುದೇ ರೀತಿಯಲ್ಲಾಗಲಿ, ಪ್ರಜೆಗಳ ಹಕ್ಕುಭಾದ್ಯತೆಗಳನ್ನು ಕುಂಠಿತಮಾಡತಕ್ಕ ಅಧಿಕಾರವನ್ನು ಅಧಿಕಾರದಲ್ಲಿ ಇರತಕ್ಕವರಿಗೆ ಕೊಡುವುದಕ್ಕೆ ಈ ಶಾಸನ ಸಭೆಯು ಎಂದಿಗೂ ಒಪ್ಪಬಾರದೆಂದು ತಮ್ಮ ಮೂಲಕ ಈ ಸಭೆಯ ಮಾನ್ಯ ಸದಸ್ಯರಲ್ಲಿ ವಿನಂತಿಮಾಡಿಕೊಳ್ಳುತ್ತೇನೆ. ನಾವು ಪ್ರಜೆಗಳ ಪ್ರತಿನಿಧಿಗಳಾಗಿ ಬಂದಿರುವವರು. ನಮ್ಮ ಧ್ಯೇಯ, ಧೋರಣೆ, ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಎತ್ತಿಹಿಡಿಯುವಂತಿರಬೇಕೇ ಹೊರತು ಅವುಗಳನ್ನು ಕುಂಠಿತಗೊಳಿಸುವಂಥ ಪ್ರಯತ್ನಮಾಡುವುದಕ್ಕೆ ಹೋಗಬಾರದು. ಅಂಥ ಅಧಿಕಾರವನ್ನು, executive power ಕೊಡುವುದಕ್ಕೆ ಎಂದಿಗೂ ಸಹ ನಮ್ಮತಿನ ಕೂಡದು ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಈ ಮಸೂದೆಯನ್ನ ತರುವುದಕ್ಕೆ ಮುಖ್ಯಕಾರಣ ಓಟರುಗಳ ಸಂಖ್ಯೆ ಜಾಸ್ತಿ ಇತ್ತು ಎಂದು ಹೇಳುತ್ತಾರೆ. ಓಟರುಗಳ ಸಂಖ್ಯೆ ಜಾಸ್ತಿಯಾಗುವುದು, ಕಡಮೆಯಾಗುವುದು, ಯಾವುದೇ ಒಂದು ವಾರ್ಡಿನ ಓಟರುಗಳ ಸಂಖ್ಯೆಯನ್ನು ಹೆಚ್ಚು ಕಡಿಮೆ ಮಾಡುವುದು, ಇವೆಲ್ಲ ಕಾಲಕ್ರಮಾನುಗುಣವಾಗಿ ಮಾಡಬೇಕಾದ ಕಾರ್ಯಗಳು. ಈ ಕಾರ್ಯಗಳನ್ನು ಸರ್ಕಾರದವರು ಸರಿಯಾಗಿ ಮಾಡದೆ ಇದ್ದ ಮಾತ್ರಕ್ಕೆ ಜನಗಳ ಪ್ರಾತಿನಿಧ್ಯ ಕುಂಠಿತವಾಗಬಾರದೆಂದು ಹೇಳುತ್ತೇನೆ. ಇದು ಒಂದು ತೀವ್ರ ಪ್ರತಿಗಾಮಿ ಮಸೂದೆಯಾಗಿದೆ. ಇಂಥ ಮಸೂದೆಗೆ ನಾವು ಖಂಡಿತ ಸಮ್ಮತಿಯನ್ನು ಕೊಡುವುದಕ್ಕಾಗುವುದಿಲ್ಲವೆಂದು ಹೇಳಿ ಈ ಮಸೂದೆಯನ್ನು ವಿರೋಧಿಸುತ್ತೇನೆ.

Sri R. CHENNIGARAMAIAH.—My friend is confusing these two issues. He is confusing the extension of the term of the Corporation with the five casual vacancies. These vacancies can be filled up by means of bye-elections. This amending Bill has been brought before the House for the purpose of extending the term of the Corporation. In the meanwhile, if there be any vacancy, it can be filled up by means of bye-election. The question of filling up casual vacancy does not arise here.

Sri B. HUTCHE GOWDA.—What action has been taken so far for filling up the vacancies? Is it the intention of Government to fill them up?

Sri R. CHENNIGARAMAIAH.—It is not the business of Government to take action to fill up those vacanices. It is the business of the Corporation Commissioner. He has taken the necessary action in time.

A MEMBER.—The Hon'ble Minister and the Hon'ble Member, Sri Hutche Gowda are not addressing the Chair but are addressing each other.

Mr. SPEAKER.—The discussion is in order. It is just in front of me.

The question is :

"That the City of Bangalore Municipal Corporation (Amendment) Bill, 1956, as passed by the Legislative Council, be passed."

The motion was adopted.

Mr. SPEAKER.—The business before the House being over, the House will now rise and meet on Monday at 8-30 A.M.

The House adjourned at Ten Minutes past Six of the Clock to meet again at Thirty Minutes past Eight of the Clock on Monday, the 31st December 1956.